ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
09 MAR 2009

# ಕರ್ನಾಟಕ ಸರ್ಕಾರ

ಸಂ: ಕಂಇ 78 ಎಂಆರ್‌ಆರ್ 2008

ಕರ್ನಾಟಕ ಸರ್ಕಾರದ ಸಚಿವಾಲಯ
ಕೆ.ಆರ್.ವೃತ್ತ
ಬೆಂಗಳೂರು, ದಿನಾಂಕ 21-02-2009

## ಸುತ್ತೋಲೆ

ವಿಷಯ:- ಪಹಣಿ ಪತ್ರಿಕೆಗಳ ಲೋಪದೋಷಗಳನ್ನು ಸರಿಪಡಿಸುವ ಅವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂ: ಕಂಇ/78/ಎಂಆರ್‌ಆರ್ 2008 ದಿನಾಂಕ 23/09/2008.
2. ಸರ್ಕಾರದ ಸುತ್ತೋಲೆ ಸಂ: ಆರ್‌ಡಿ 78 ಎಂಆರ್‌ಆರ್ 2008 ದಿನಾಂಕ 12/01/2009

*******

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಗಣಕೀಕೃತ ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಉದ್ದೇಶಕ್ಕಾಗಿ ಅಧಿಕಾರವನ್ನು ತಹಸೀಲ್ದಾರರಿಗೆ ಪ್ರತ್ಯಾಯೋಜಿಸಿ ಪಹಣಿಗಳನ್ನು ಸರಿಪಡಿಸಲು ನಾಗರೀಕರಿಂದ ಅರ್ಜಿ ಸ್ವೀಕರಿಸಲು ದಿನಾಂಕ 31/1/2009 ರವರೆಗೆ ಮತ್ತು ಇವುಗಳನ್ನು ಸರಿಪಡಿಸಲು ದಿನಾಂಕ 31/3/2009 ರವರೆಗೆ ಕಾಲಾವಕಾಶ ನೀಡಿ ಎಲ್ಲಾ ತಹಸೀಲ್ದಾರರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ನೀಡಿ ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಪಹಣಿ ಸರಿಪಡಿಸಲು ಕ್ರಮಕೈಗೊಳಲು ನಿರ್ದೇಶನ ನೀಡಲಾಗಿದ್ದಿತು.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ನಾಗರೀಕರಿಂದ ವಿನಂತಿಗಳನ್ನು ಸ್ವೀಕರಿಸಲು ದಿನಾಂಕ 28/2/2009 ರವರೆಗೆ ಮತ್ತು ತಹಸೀಲ್ದಾರರು ಇವುಗಳನ್ನು ಸರಿಪಡಿಸಲು ದಿನಾಂಕ 30/4/2009 ರವರೆಗೆ ಅವಧಿಯನ್ನು ವಿಸ್ತರಿಲಾಗಿರುತ್ತದೆ. ಪಹಣಿ ತಿದ್ದುಪಡಿ ಬಗ್ಗೆ ಬಂದ ಅರ್ಜಿಗಳ ವಿಲೇವಾರಿ ಬಗ್ಗೆ ಸಲ್ಲಿಸಲಾದ ಪ್ರಗತಿ ವರದಿಗಳನ್ನು ಪರಿಶೀಲಿಸಲಾಗಿ, ಪಹಣಿ ತಿದ್ದುಪಡಿಗಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಬಂದ ಒಟ್ಟು 34087 ಅರ್ಜಿಗಳ ಪೈಕಿ 6649 ಅರ್ಜಿಗಳನ್ನು ಮಾತ್ರ ಇತ್ಯರ್ಥಗೊಳಿಸಲಾಗಿದ್ದು, 27438 ಅರ್ಜಿಗಳು ಬಾಕಿ ಉಳಿದಿರುತ್ತವೆ. ಇದರಿಂದ, ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಇಡೀ ರಾಜ್ಯದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿದ್ದು, ಇದನ್ನು ಪ್ರೋತ್ಸಾಹಿಸ ಬೇಕಾಗಿರುತ್ತೆ.

ಆದ್ದರಿಂದ ಸರ್ಕಾರವು ಈ ಮೇಲಿನ ಅಂಶವನ್ನು ಪರಿಗಣಿಸಿ, ಹಾಗೂ ಕೆಲವು ಜಿಲ್ಲಾಧಿಕಾರಿಗಳಿಂದ ಬಂದ ಪ್ರಸ್ತಾವಣೆ ಹಿನ್ನಲೆಯಲ್ಲಿ ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ನಾಗರೀಕರಿಂದ ವಿನಂತಿಗಳನ್ನು ಸ್ವೀಕರಿಸಲು ದಿನಾಂಕ 31-03-2009 ವಿಸ್ತರಿಸಲಾಗಿದೆ. ಇವುಗಳನ್ನು ಇತ್ಯರ್ಥ ಪಡಿಸಲು ಹಿಂದೆ ನಿಗದಿಯಾಗಿದ್ದ ದಿನಾಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ತಹಶೀಲ್ದಾರರು ಈ ವಿಷಯ ಕುರಿತು, ಗ್ರಾಮಗಳಲ್ಲಿ ಟಾಂ ಟಾಂ ಮೂಲಕ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ವಾರ್ತಾ ಅಂಶವಾಗಿ (ಪ್ರಕಟಣೆ ಖರ್ಚು ಇಲ್ಲದಂತೆ) ವ್ಯಾಪಕ ಪ್ರಚಾರ ನೀಡಲು ಸೂಚಿಸಿದೆ.

21/2/09

ರಾಜೀವ್ ಚಾವ್ಲ ಐ.ಎ.ಎಸ್
ಸರ್ಕಾರದ ವಿಶೇಷ ಕಾರ್ಯದರ್ಶಿಗಳು (ಭೂಮಿ)
ಕಂದಾಯ ಇಲಾಖೆ.

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಆಯುಕ್ತರು
2) ಎಲ್ಲಾ ಜಿಲ್ಲಾಧಿಕಾರಿಗಳು
3) ಎಲ್ಲಾ ಉಪವಿಭಾಗಧಿಕಾರಿಗಳು
4) ಎಲ್ಲಾ ತಹಸೀಲ್ದಾರರು

ಜಿಲ್ಲಾಧಿಕಾರಿಗಳವರ ಕಛೇರಿ
ಹಾಸನ ಜಿಲ್ಲೆ, ಹಾಸನ.
ದಿನಾಂಕ